ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	710 (900)
ಮಾನ್ಯ ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	20.09.2021
ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	2018- 2019 ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಸುಮಾರು ರೂ. 18.00 ಕೋಟಿ ಅವ್ಯವಹಾರದ ಎ.ಸಿ.ಬಿ ತನಿಖೆ ಯಾವ ಹಂತದಲ್ಲಿದೆ; ಈ ತನಿಖೆ ಇಷ್ಟು ತಡವಾಗುತ್ತಿರುವುದಕ್ಕೆ ಕಾರಣವೇನು;	2018 – 2019ರಲ್ಲಿ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ನಲ್ಲಿ ನಡೆದಿದೆ ಎನ್ನಲಾದ ಸುಮಾರು 18.00 ಕೋಟಿ ರೂಪಾಯಿಯ ಅವ್ಯವಹಾರಕ್ಕೆ ಸಂಬಂಧಿಸಿದಂತೆ, ದಿನಾಂಕ: 29.06.2018 ರಂದು ACB ಗೆ ನೀಡಲಾಗಿರುವ ಅಭಿಯೋಜನಾ ಮಂಜೂರಾತಿಗೆ W.P. No: 28544/2018, W.P. No: 29892-95/2018, W.P. No: 38416/2018 ಮತ್ತು W.P. No 1613/2019 ರಲ್ಲಿ ಅಪಾದಿತ ಅಧಿಕಾರಿ/ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು / ಕಲಬುರಗಿ ಪೀಠ ಇಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತಾರೆ. ಈ ಸಂಬಂಧ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ.
(ಆ)	ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆನ್ನಲಾದ ಸಿಬ್ಬಂದಿಗಳ ಹೆಸರು ಮತ್ತು ಹುದ್ದೆಗಳಾವುವು; ಅವುಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು?	1) ಡಾ|| ಚೆನ್ನಣ್ಣ ಸಿ, ಹಿಂದಿನ ನಿರ್ದೇಶಕರು, ಬ್ರಿಮ್ಸ್ ಬೀದರ್ ಮತ್ತು ಪ್ರಸ್ತುತವಾಗಿ ಪ್ರಾಧ್ಯಾಪಕರು ಶಸ್ತ್ರಚಿಕಿತ್ಸ ವಿಭಾಗ, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ. 2) ಡಾ|| ಶಿವಕುಮಾರ ಶೆಟಕಾರ್, ವೈದ್ಯಕೀಯ ಅಧೀಕ್ಷಕರು, ಬ್ರೀಮ್ಸ್ ಬೋಧಕ ಆಸ್ಪತ್ರೆ, ಬೀದರ್ 3) ಶ್ರೀ ಆನಂದ ಸಾಗರರೆಡ್ಡಿ, (ಅಂದಿನ ಮುಖ್ಯ ಆಡಳಿತಾಧಿಕಾರಿ, ಬ್ರೀಮ್ಸ್) ಪ್ರಸ್ತುತ ಮಾತೃ ಇಲಾಖೆಯಲ್ಲಿ ಜಂಟಿ ನಿರ್ದೇಶಕರ ಹುದ್ದೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ. 4) ಶ್ರೀಮತಿ ಅನುಸೂಯಾ, ಸಹಾಯಕ ಆಡಳಿತಾಧಿಕಾರಿ, (ಪ್ರಸ್ತುತವಾಗಿ ಆಕುಕ ಇಲಾಖೆಯ ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಬೀದರ್ ಜಿಲ್ಲೆ ಬೀದರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.) 5) ಶ್ರೀ ಬಾಬು ಕೋಟೆ, ಕಛೇರಿ ಅಧೀಕ್ಷಕರು. 6) ಶ್ರೀ ಪ್ರಕಾಶ ಮಡಿವಾಳ, ಕಛೇರಿ ಅಧಿಕ್ಷಕರು. 7) ಶ್ರೀ ಪ್ರಕಾಶ ಮಾಳಗೆ, ಪ್ರಥಮ ದರ್ಜೆ ಸಹಾಯಕರು ಕ್ರಮ ಸಂಖ್ಯೆ: 5, 6 ಮತ್ತು 7 ರಲ್ಲಿನ ಸಿಬ್ಬಂದಿಗಳು ಆದೇಶ ಸಂಖ್ಯೆ: ಡಿಜಿಪಿ/ಗುವಿ/ಬೀದರ್/18/2020-21 ರಂತೆ ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ತಮ್ಮ ಹುದ್ದೆಯ ಲೀನ್‌ನೊಂದಿಗೆ ಬದಲಾಯಿಸಲಾಗಿದ್ದು, ಪ್ರಸ್ತುತವಾಗಿ ಅಮಾನತ್ತಿನಲ್ಲಿರುತ್ತಾರೆ. 8) ಶ್ರೀಮತಿ ವರ್ಷಾ ದೇಶಮುಖ್, ಪ್ರಥಮ ದರ್ಜೆ ಸಹಾಯಕರು ಅಮಾನತ್ತಿನಲ್ಲಿರುತ್ತಾರೆ. 9) ಶ್ರೀ ಮಾಚಾ ಕಲ್ಲಪ್ಪಾ (ನಿಧನ ಹೊಂದಿರುತ್ತಾರೆ) 10) ಶಿವಾಜಿ, ದ್ವಿತೀಯ ದರ್ಜೆ ಸಹಾಯಕ (ಪ್ರಸ್ತುತವಾಗಿ ಆವಕ ಶಾಖೆಯ ವಿಷಯ ನಿರ್ವಾಹಕರಾಗಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಅಧಿಕಾರಿ/ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ದಿನಾಂಕ:05/01/2021ರಂದು ಆದೇಶ

		ಹೊರಡಿಸಲಾಗಿದೆ. ಸದರಿ ಆದೇಶವನ್ನು ಪ್ರಶ್ನಿಸಿ ಡಾ|| ಚನ್ನಣ್ಣ ಸಿ. ಹಾಗೂ ಡಾ|| ಶಿವಕುಮಾರ ಶೆಟಕಾರ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟೀಷನ್ ಸಂ: 4177/2021 (S-RES) ದಾಖಲಿಸಿ ದಿನಾಂಕ:26/02/2021 ರಂದು ತಡೆಯಾಜ್ಞೆ ಪಡೆದಿರುತ್ತಾರೆ. ಹಾಗೂ ಶ್ರೀ ಪ್ರಕಾಶ ಎಸ್. ಮಡಿವಾಳ, ಶ್ರೀಮತಿ ವರ್ಷಾ ಹಾಗೂ ಶ್ರೀ ಬಾಬು ಕೋಟಿ ಇವರು ಉಚ್ಚ ನ್ಯಾಯಾಲಯ ಕಲಬುರ್ಗಿ ಪೀಠ ಇಲ್ಲಿ ರಿಟ್ ಪಿಟೀಷನ್ ಸಂ: 200587/2021 ದಾಖಲಿಸಿ ದಿನಾಂಕ:17/03/2021 ರಂದು ಹಾಗೂ ಶ್ರೀ ಆನಂದ ಸಾಗರ್ ರೆಡ್ಡಿ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ರಿಟ್ ಅರ್ಜಿ ಸಂ: 1650/2021ರಲ್ಲಿ ದಿನಾಂಕ:02/06/2021ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಸದರಿ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ವಹಿಸಲಾಗಿದೆ.

ಕಡತ ಸಂ: ಎಂಇಡಿ 356 ಎಂ ಎಸ್ ಎಫ್ 2021

(ಡಾ|| ಕೆ. ಸುಧಾಕರ್)
ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.